ಆಗಿರುವಂಥಾದ್ದು, ಯಾರೋ ಮುಚ್ಚಿಡುವಂಥಾದ್ದು, ಅಧಿಕಾರಿಗಳು ತಪ್ಪು ಮಾಹಿತಿಗಳನ್ನು ಮಂತ್ರಿಗಳಿಗೆ ಕೊಡುತ್ತಿದ್ದಾರೆ. ಅದಕ್ಕೆ ನಮಗೆ ಉತ್ತರಗಳು ಬಂದಿಲ್ಲವೆಂಬ ಭಾವನೆ ಬಂದಿದೆ.

ಶ್ರೀ ಹೆಚ್. ಡಿ. ಬಸವರಾಜು : ಇದು 23 ನೇ ತಾರೀಖಿನಂದು ಆಗಿರುವಂಥಾದ್ದು

ಅಧ್ಯಕ್ಷರು : ಅದನ್ನು ಸರ್ಕಾರದವರು ಬಹಳ ಸೀರಿಯಸ್ ಆಗಿ ತೆಗೆದುಕೊಳ್ಳಬೇಕಾಗಿರುತ್ತದೆ.

---

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3336
2. ಸದಸ್ಯರ ಹೆಸರು ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು)
3. ಉತ್ತರಿಸುವ ಸಚಿವರು ಶ್ರೀ ಬಸವರಾಜು ಎಸ್. ಹೊರಟ್ಟಿ (ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.)

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಲಾಟರಿ ಯೋಜನೆ ಮೂಲಕ ಸಂಗ್ರಹಿಸಿದ ಉಳಿತಾಯದ ಮೊತ್ತ ಎಷ್ಟು?</td><td>ಕರ್ನಾಟಕ ಲಾಟರಿಯಿಂದ ಕಳೆದ 3 ವರ್ಷಗಳಿಂದ ಸರ್ಕಾರಕ್ಕೆ ಲಭಿಸಿರುವ ನಿವ್ವಳ ಲಾಭದ ವಿವರ ಈ ಕೆಳಕಂಡಂತಿದೆ.
(ರೂ. ಲಕ್ಷಗಳಲ್ಲಿ)
<table>
<tr><th></th><th>ಸಾಂಪ್ರದಾಯಿಕ ಲಾಟರಿ</th><th>ಗಣಕೀಕೃತ ನೆಟ್‌ವರ್ಕ್ ಲಾಟರಿ</th></tr>
<tr><td>2001–02</td><td>1046.00</td><td>--</td></tr>
<tr><td>2002–03</td><td>1225.00</td><td>5013.92</td></tr>
<tr><td>2003–04</td><td>5000.00</td><td>9506.70</td></tr>
</table></td></tr>
<tr><td>ಆ)</td><td>ಲಾಟರಿ ಯೋಜನೆಗಳನ್ನು ಜನಪ್ರಿಯಗೊಳಿಸುವ ಅಥವಾ ಕಡಿಮೆ ಮಾಡುವ ಕುರಿತಾದ ಸರ್ಕಾರದ ನಿಲುವುಗಳೇನು?</td><td>ಲಾಟರಿ ಯೋಜನೆಯನ್ನು ಜನಪ್ರಿಯಗೊಳಿಸಲು ವಿವಿಧ ಯೋಜನೆಗಳಲ್ಲಿ ಬಹುಮಾನ ಮೊತ್ತವನ್ನು ಹಾಗೂ ಬಹುಮಾನ ಸಂಖ್ಯೆಗಳನ್ನು ಹೆಚ್ಚಿಸಲಾಗುತ್ತಿದೆ. ಅಲ್ಲದೆ ಹೊಸ ರಚನೆ ಮತ್ತು ಮಾದರಿಯಂತೆ ಹೊಸ ಯೋಜನೆಗಳನ್ನು ರೂಪಿಸಲಾಗುತ್ತಿದೆ.</td></tr>
</table>

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಇ.	ಈ ಲಾಟರಿ ಯೋಜನೆಗಳಲ್ಲಿ ತೊಡಗಿಸಿಕೊಂಡಿರುವ ಅಧಿಕೃತ ಏಜೆಂಟರುಗಳ ಸಂಖ್ಯೆ ಎಷ್ಟು?	ಈ ಲಾಟರಿ ಯೋಜನೆಗಳಲ್ಲಿ ತೊಡಗಿಸಿಕೊಂಡಿರುವ ಅಧಿಕೃತ ಏಜೆಂಟರುಗಳು 4609
ಈ.	ಅವರುಗಳಿಗೆ ನಿಗಧಿಪಡಿಸಲಾದ ಕಮಿಷನ್ ಮೊತ್ತವನ್ನು ಸಕಾಲದಲ್ಲಿ ಪಾವತಿಸಲಾಗುತ್ತಿದೆಯೇ?	ಈ ಏಜಂಟರುಗಳು ಟಿಕೇಟ್‌ಗಳನ್ನು ಖರೀದಿಸುವಾಗಲೇ ತಮ್ಮ ಕಮಿಷನ್ ಹಣವನ್ನು ಮುರಿದುಕೊಂಡು ಉಳಿಕೆ ಮೊತ್ತ ಪಾವತಿಸಿ ಟಿಕೇಟ್ ಖರೀದಿ ಮಾಡುವುದರಿಂದ ಖರೀದಿ ಸಮಯದಲ್ಲೇ ಅವರಿಗೆ ಕಮಿಷನ್ ಮೊತ್ತ ಪಾವತಿಸಿದಂತಾಗುತ್ತದೆ.
ಉ.	ಹಾಗಿಲ್ಲದಿದ್ದಲ್ಲಿ, ಕಾರಣಗಳೇನು?	ಉದ್ಭವಿಸುವುದಿಲ್ಲ.
ಊ.	ಎಷ್ಟು ಮೊತ್ತದ ಕಮಿಷನ್ ಹಣ ಬಾಕಿ ಇದೆ ? ಹಾಗೂ ಯಾವಾಗಅದನ್ನು ಪಾವತಿಸಲಾಗುವುದು?	ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಋ.	ಲಾಟರಿಗಳ ಮೂಲಕ ಬಂದ ಹಣವನ್ನು ಫಲಾನುಭವಿಗಳು ಪಡೆಯದೇ ಇಲಾಖೆಯಲ್ಲಿಯೇ ಕಳೆದ ಎರಡು ವರ್ಷಗಳಲ್ಲಿ ಉಳಿದ ಹಣದ ಮೊತ್ತ ಎಷ್ಟು?	ಕಳೆದ 2 ವರ್ಷಗಳಲ್ಲಿ ಲಾಟರಿ ಬಹುಮಾನದ ಹಣವನ್ನು ಫಲಾನುಭವಿಗಳು ಪಡೆಯದೇ ಇಲಾಖೆಯಲ್ಲಿ ಉಳಿದ ಬಹುಮಾನ ಹಣದ ವಿವರ ಕೆಳಕಂಡಂತಿದೆ. 2002–03 ರೂ. 12,16,88,725–00 2002–04 ರೂ. 5,51,86,575–00

ಶ್ರೀ ಎಸ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ಬೇರೆ ರಾಜ್ಯದ ಸಿಂಗಲ್ ಲಾಟರಿಯನ್ನು ನಿಲ್ಲಿಸುವುದಕ್ಕೆ ತಾವು ಯಾವ ಕ್ರಮವನ್ನು ಕೈಗೊಳ್ಳುತ್ತಿದ್ದೀರಿ, ಮತ್ತೆ

ಯಾವಾಗ ಕೈಗೊಳ್ಳುತ್ತೀರಿ ? ನಂತರ ಲಾಟರಿಯಲ್ಲಿ ಬಂದಂತಹ ಬಹುಮಾನ ಬಂದಿದ್ದು, ಅದನ್ನು ಪಡೆದುಕೊಳ್ಳುವುದಕ್ಕೆ ಏನಾದರೂ ಕಮೀಷನ್ ಅನ್ನು ಕೊಡುವುದು ಇದೆಯಾ ? ಅಥವಾ ಅದಕ್ಕೆ ಸಾಕ್ಷ್ಯಾಧಾರಗಳನ್ನು ಕೊಟ್ಟರೂ ಎಷ್ಟು ಸಮಯವನ್ನು ಕಾಯಬೇಕು?

ಶ್ರೀ ಬಿ. ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೇ, ಈಗ ಬೇರೆ ರಾಜ್ಯದ ಸಿಂಗಲ್ ಲಾಟರಿಗಳು ಯಾವುದು, ರಾಜ್ಯದಲ್ಲಿ ಪ್ರಚಲಿತವಾಗಿಲ್ಲ. ಎಲ್ಲವನ್ನು ಅಧಿಕೃತವಾಗಿ ಬ್ಯಾನ್ ಮಾಡಲಾಗಿದೆ. ಇನ್ನು ಅವರಿಗೆ ಕಮೀಷನ್ ಕೊಡುವ ವಿಚಾರದಲ್ಲಿ ಬೇರೆಯವರು ಟಿಕೇಟ್ ಕೊಟ್ಟಿರುತ್ತಾರೋ, ಆಗ ಅವರು ಕಮೀಷನ್ ಅನ್ನು ಮುರಿದು ಕೊಡುತ್ತೇವೆನ್ನುವಂಥಾದ್ದು, ಒಂದು ಇದರಿಂದ ಯಾವುದೇ ಬಾಕಿ ಅವರಿಗೆ ಉಳಿಯುವುದಿಲ್ಲ. ಇಲ್ಲಿ ಲಾಟರಿ ಎತ್ತಿದ ನಂತರ, ಅವರು ಯಾವಾಗ ಲಾಟರಿ ಟಿಕೇಟ್ ಅನ್ನು ಪ್ರೊಡ್ಯೂಸ್ ಮಾಡುತ್ತಾರೊ, ಆಗ ತಕ್ಷಣ ಹಣವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಲಾಗುವುದು. ಯಾವುದೇ ರೀತಿಯಲ್ಲಿ ಹಿಂದು ಮುಂದು ನೋಡುವುದು, ತಡ ಮಾಡುವಂತಹ ಯಾವುದೇ ತೊಂದರೆಗಳು ಇಲ್ಲ. ಅವರಿಗೆ ಟಿಕೇಟ್ ಪ್ರೊಡ್ಯೂಸ್ ಮಾಡಿದ ತಕ್ಷಣ ಹಣವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಂ. ಕೆ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸಿಂಗಲ್ ಲಾಟರಿ ಸಾಕಷ್ಟು ನಡೆಯುತ್ತಿವೆ. ಇದು ಬೇರೆ ರಾಜ್ಯದ್ದು, ನಮ್ಮ ರಾಜ್ಯದಲ್ಲಿ ಸಿಂಗಲ್ ಲೈನ್ನ ಡಿಜಿಟ್ ಲಾಟರಿ ಎಂದು ಎಲ್ಲಾ ಕಡೆಗಳಲ್ಲೂ ರಾಜರೋಷವಾಗಿ ಏನು ಆನ್ ಲೈನ್ ಲಾಟರಿಗಳು ನಡೆಯುತ್ತಿತ್ತೋ, ಅಷ್ಟೆ ಸಮನಾಗಿ ಸಿಂಗಲ್ ಲೈನ್ ಲಾಟರಿಗಳು ಎಲ್ಲಾ ಕಡೆಗಳಲ್ಲೂ ನಡೆಯುತ್ತಿವೆ. ಇದಕ್ಕೆ ಯಾವುದೇ ರೀತಿಯಾದ ಕಂಟ್ರೋಲ್ ಆಗಿಲ್ಲ.

ಶ್ರೀ. ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸಿಂಗಲ್ ಲಾಟರಿಯನ್ನು ಬ್ಯಾನ್ ಮಾಡಿದ್ದೇವೆಂದು ಹೇಳಿದರು. ಆದರೆ ಬೆಂಗಳೂರಿನಲ್ಲಿ 500 ಅಂಗಡಿಗಳು ಇದೆ. ಅವರು ಅದೇ ಸಿಸ್ಟಂನಲ್ಲಿ ಆಡುತ್ತಾರೆ. ಅದು ನಮಗೂ ಅರ್ಥವಾಗುತ್ತಿಲ್ಲ. ಇದು ಏನು ಎಂದು ಅರ್ಥವಾಗುತ್ತಿಲ್ಲ. ಅಲ್ಲಿ ಜನರು ಮಾತ್ರ ತುಂಬಿರುತ್ತಾರೆ. ಅವರು ಬೆಳಿಗ್ಗೆಯಿಂದ ಸಂಜೆಯವರೆಗೂ ಅಲ್ಲಿ ಇರುತ್ತಾರೆ.

ಅಧ್ಯಕ್ಷರು : ಸರ್ಕಾರದ ಆದೇಶವೇನೆಂದರೆ ಇದು ಬ್ಯಾನ್ ಆಗಿದೆ. ಅದರೆ ಅದು ಅಂಗಡಿಯವರಿಗೆಲ್ಲಾ ತಲುಪಿಲ್ಲ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ

ಅಶೋಕ್‌ರವರು 500 ಅಂಗಡಿಗಳಿವೆ ಎಂದು ಹೇಳಿದರು. ಆದರೆ, ಬೆಂಗಳೂರಿನಲ್ಲಿ ಸುಮಾರು ಒಂದು ಸಾವಿರ ಅಂಗಡಿಗಳಿವೆ ಎಂದು ನಾನು ಹೇಳುತ್ತೇನೆ. Every lane, by-lane in Bangalore city.

ಎಲ್ಲಿ ಹೋಗಿ ನೋಡಿದರೂ ಲಾಟರಿ ಅಂಗಡಿಗಳು ಇವೆ. ನಾವು ಆನ್-ಲೈನ್ ಲಾಟರಿಯನ್ನು ಬ್ಯಾನ್ ಮಾಡಿದ್ದೇವೆ ಎಂದು ಒಂದು ಕಡೆ ಸರ್ಕಾರದವರು ಹೇಳುತ್ತಾರೆ. ಇನ್ನೊಂದು ಕಡೆ, ಪ್ರತಿಯೊಂದು ಬೀದಿಯಲ್ಲಿ, ಪ್ರತಿಯೊಂದು ಮೊಹಲ್ಲಾದಲ್ಲಿ ಎಲ್ಲೆಲ್ಲಿ ಬಡವರಿದ್ದಾರೆ, weaker sections of the society ಇದ್ದಾರೆ, ಅಲ್ಲೆಲ್ಲಾ ಒಂದೊಂದು ಲಾಟರಿ ಅಂಗಡಿ ಇದೆ. ಇದು ಏನೆಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ. ಕೆ. ಜಯಪ್ರಕಾಶ ಹೆಗ್ಡೆ : ಇದು ಕೇವಲ ಬೆಂಗಳೂರಿನಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿದೆ.

ಶ್ರೀ ವಾಟಾಳ್ ನಾಗರಾಜ್ : ಲಾಟರಿ ಜಾತ್ರೆ ನಡೆಯುತ್ತಿದೆ.

ಶ್ರೀ ಅರಗ ಜ್ಞಾನೇಂದ್ರ : ಇದರಲ್ಲಿ ಪೊಲೀಸ್ ಇಲಾಖೆ ಶಾಮೀಲಾಗಿದೆ.

ಶ್ರೀ ಆರ್. ಅಶೋಕ್ : ಪೊಲೀಸರು ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೆ.

ಅಧ್ಯಕ್ಷರು: ಇದು ಎಲ್ಲರ ಸಮಸ್ಯೆ. ಅವರು ಉತ್ತರ ಹೇಳುತ್ತಾರೆ ಬಿಡಿ. ಸುಮ್ಮನೆ ಎಲ್ಲರೂ ಎದ್ದು ನಿಂತುಕೊಳ್ಳುವುದರಲ್ಲಿ ಅರ್ಥವಿಲ್ಲ. ಅದಕ್ಕೇ ನಾನು ಸೂಚ್ಯವಾಗಿ ಹೇಳಿದ್ದು, ಎಲ್ಲಾ ಕಡೆ ಸಿಂಗಲ್ ನಂಬರ್ ಲಾಟರಿ ನಡೆಯುತ್ತಿರುವುದನ್ನು ನಾವೂ ನೋಡುತ್ತಿರುತ್ತೇವೆ, ಕೇಳುತ್ತಿರುತ್ತೇವೆ, ಅದು ನಡೆಯುತ್ತಿರುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ಬಸವರಾಜ ಎಸ್ ಹೊರಟ್ಟಿ : ಮಾನ್ಯ ಸದಸ್ಯರು ಹೇಳಿದಂತೆ ಅನೇಕ ವಿಚಾರಗಳಿಗೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ. ಪ್ರಾಮಾಣಿಕವಾಗಿ ಹೇಳುವುದಾದರೆ, ಕಾನೂನು ಪ್ರಕಾರ ಸಿಂಗಲ್ ನಂಬರೆ ಲಾಟರಿ ನಿಂತಿದೆ. ಆದರೆ, ಅನೇಕ ಕಡೆ ಇನ್ನೂ ನಡೆಯುತ್ತಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಪೊಲೀಸರಿಗೆ ಬಹಳ ಸಲ ಹೇಳಿದ್ದೇನೆ. ಹೋಂ ಸೆಕ್ರೆಟರಿ, ಡಿ. ಜಿ. ಪಿ. ಅವರನನು ಕರೆದು ಸಭೆ ಮಾಡಿದ್ದೇವೆ. ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಎಸ್. ಪಿ.ಗಳನ್ನು ಕರೆದು ಮೂರು ಸಲ ಸಭೆ ಮಾಡಿದ್ದೇವೆ. ಆದರೂ ಸಹ ಇದು ಇನ್ನೂ ನಡೆಯುತ್ತಿದೆ. ತಾವು ಹೇಳುವುದು ನಿಜ. ಇದರ ಬಗ್ಗೆ ಸರ್ಕಾರ ಇನ್ನೂ ಹೆಚ್ಚಿನ ಗಮನ ಹರಿಸಿ,

ಇದನ್ನು ನಿಲ್ಲಿಸಬೇಕು ಎಂದು ತೀರ್ಮಾನ ಮಾಡಿದ್ದು, ಮತ್ತೊಂದು ಸಾರಿ ಸಭೆ ಕರೆದು, ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಲು ಸರ್ಕಾರ ಸಿದ್ಧವಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ಇನ್ಸ್‌ಪೆಕ್ಟರ್‌ಗಳೇ ಅದಕ್ಕೆ ಪಾರ್ಟ್‌ನರ್ಸ್ ಆಗಿದ್ದಾರೆ. ಅದು ಮಾಮೂಲು ಅಲ್ಲ, ಪಾರ್ಟ್‌ನರ್‌ಷಿಪ್ ನಡೆಯುತ್ತಿದೆ. ನಿಮಗೆ ನಾಚಿಕೆಯಾಗಬೇಕು. ಅವರ ಸಂಬಳವನ್ನಾದರೂ ಜಾಸ್ತಿ ಮಾಡಿ.

ಶ್ರೀ ಆರ್. ಅಶೋಕ್ : ಇದರಿಂದ ಅವರಿಗೆ ತಿಂಗಳಿಗೆ 50–60 ಸಾವಿರ ರೂಪಾಯಿಗಳ ಆದಾಯ ಬರುತ್ತಿದೆ. ಒಬ್ಬೊಬ್ಬ ಏಜೆಂಟ್ ತಿಂಗಳಿಗೆ 10 ಲಕ್ಷ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದಾರೆ. ಅದು ಸರ್ಕಾರಕ್ಕೆ ಬರುತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸರ್ಕಾರ ಮಾಡಿರುವ ಆದೇಶ ಕೇವಲ ಕಾಗದದ ಮೇಲಿದೆ. ಆದರೂ ಅದು ನಡೆಯುತ್ತಿದೆ ಎಂದು ಸ್ವತಃ ಅಧ್ಯಕ್ಷರು ಹೇಳಿದರು. ನೀವೂ ಅದನ್ನು ಒಪ್ಪಿಕೊಳ್ಳುತ್ತೀರಿ. ಸರ್ಕಾರ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ ಮೇಲೆ, ಪೊಲೀಸ್ ಇಲಾಖೆ ಅದನ್ನು ಜಾರಿಗೊಳಿಸಿ, ಅದು ಆಗದಂತೆ ಕಟ್ಟುನಿಟ್ಟಾಗಿ ನೋಡಿಕೊಳ್ಳಬೇಕು. ಈಗ ಏನಾಗಿದೆ ಎಂದರೆ, ಇದು ಮೊದಲು ಇದ್ದುದಕ್ಕಿಂತ ಡಬಲ್ ಆಗಿ, ಪೊಲೀಸ್ ಅಧಿಕಾರಿಗಳು, ಪುಢಾರಿಗಳು, ಗೂಂಡಾಗಳ ದುಡಿಮೆಗೆ ಅದು ಅವಕಾಶ ಮಾಡಿಕೊಡುತ್ತಿದೆ. ಇದು ಗಲ್ಲಿಗಲ್ಲಿಯಲ್ಲಿ ಮುಂದುವರೆದಿದೆ ಎಂದು ಎಲ್ಲ ಸದಸ್ಯರೂ ಹೇಳುತ್ತಾರೆ. ನೀವು ಪೊಲೀಸರಿಗೆ ಸೂಚನೆ ಕೊಟ್ಟ ಮೇಲೆ, ಅದರಂತೆ ಯಾರು ಮಾಡುವುದಿಲ್ಲ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ, ಇವತ್ತು ಒಬ್ಬೊಬ್ಬ ಸಬ್–ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ ಇಲ್ಲಿಗೆ (ಬೆಂಗಳೂರಿಗೆ) ಬರಬೇಕೆಂದರೆ, 15–20 ಲಕ್ಷ ರೂಪಾಯಿಗಳನ್ನು ಕೊಟ್ಟು ಬರುತ್ತಿದ್ದಾರೆ. ಈ ಮಾಮೂಲಿ ವಸೂಲು ಬರುತ್ತದೆ ಎನ್ನುವುದಕ್ಕೋಸ್ಕರವಾಗಿ ಹೀಗೆ ಕೊಟ್ಟು ಇಲ್ಲಿಗೆ ಬರುತ್ತಿದ್ದಾರೆ. ತಾವು ಕಟ್ಟುನಿಟ್ಟಾಗಿ ಬಿಗಿ ಮಾಡಿ, ಇದು ನಡೆಯದ ಹಾಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಇದಕ್ಕೆ ನಮಗೆ ಉತ್ತರ ಬೇಕು. ಇದು ನಡೆಯುತ್ತಿದೆ ಎಂದು ನೀವೇ ಒಪ್ಪಿಕೊಂಡರೆ ಹೇಗೆ ? ಬಸವರಾಜ ಹೊರಟ್ಟಿಯಂಥವರು, ಉತ್ಸಾಹಿಗಳಾಗಿರುವಂಥ ಹೊಸ ಸಚಿವರು, ನಿಮಗೆ ಈ ಇಲಾಖೆ ಸಿಕ್ಕಾಗ, ಇದಕ್ಕೊಂದು ಬಿಗಿ ತಾರದಿದ್ದರೆ, ಬಿಗಿ ಮಾಡಿದಿದ್ದರೆ ಇನ್ನು ನಾವು ಯಾರ ಮೊರೆ ಹೋಗೋಣ.

ಶ್ರೀ ಬಸವರಾಜ ಎಸ್ ಹೊರಟ್ಟಿ : ಲಾಟರಿ ಸೆಂಟರ್‌ಗಳಲ್ಲಿ ಟ್ರೆಡೀಷನಲ್ ಲಾಟರಿಗಳು ನಡೆಯುತ್ತಿವೆ. ಟ್ರೆಡೀಷನಲ್ ಲಾಟರಿಗಳು ನಡೆಯುವಂಥ ಕಡೆಗಳಲ್ಲಿ ಕೆಲವರು ಏನು ಮಾಡುತ್ತಾರೆಂದರೆ, ಒಂದಂಕಿ ಲಾಟರಿಯ ಮಟಕಾ ಆಡುವ

ಹಾಗೆ ಅವರು ಅಂಕಿಗಳನ್ನು ಬರೆದು, ನಮಗೆ ಯಾವುದೇ ರೀತಿಯಿಂದ ಹಿಡಿಯಲು ಸಾಧ್ಯವಾಗದಂತ ಸ್ಥಿತಿ ನಿರ್ಮಾಣ ಮಾಡಿದ್ದಾರೆ. ಇವತ್ತು ಮೊಬೈಲ್‌ನಲ್ಲಿ ಸಹ ಲಾಟರಿ ಆಡುತ್ತಿದ್ದಾರೆ. ನಾವು ಎಷ್ಟೇ ಪ್ರಯತ್ನ ಮಾಡಿದರೂ ಸಹ ಇದು ನಡೆಯುತ್ತಿದೆ. ನಾವು ಕಟ್ಟು ನಿಟ್ಟಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಾವು ಡಿಸ್ಟ್ರಿಕ್ಟ್‌ಗಳಿಗೆ ಹೋದಾಗ ಎಲ್ಲಾ ಎಸ್. ಪಿ.ಗಳನ್ನು ಕರೆಸಿ ಹೇಳಿದ್ದು, ಪ್ರತಿಯೊಂದು ತಿಂಗಳಲ್ಲೂ ಅವರು ಏನೇನು ಮಾಡಿದ್ದಾರೆ, ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವ ಮಾಹಿತಿಯನ್ನು ಕಳುಹಿಸುತ್ತಾರೆ. ಕೆಲವು ಅಧಿಕಾರಿಗಳು ಅದನ್ನು ಮಾಡಿದ್ದಾರೆ. ಆದರೆ ಬಹಳಷ್ಟು ಜನ ಕೆಳಗಿನ ಅಧಿಕಾರಿಗಳು ಇನ್ನೂ ತಮ್ಮ ತಮ್ಮ ವ್ಯವಸ್ಥೆಯಲ್ಲೇ ಇದ್ದಾರೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ಸರ್ಕಾರ ಇನ್ನೊಂದು ಸಲ ಹೋಂ ಸೆಕ್ರಟರಿಯವರನ್ನು, ಡಿ. ಜಿ. ಪಿ. ಯವರನ್ನು ಕರೆಸಿ ಸಭೆ ಮಾಡಿ, ಕಟ್ಟುನಿಟ್ಟಾದ ಕ್ರಮವನ್ನು ತೆಗೆದು ಕೊಳ್ಳಲು ಪ್ರಯತ್ನವನ್ನು ಮಾಡುತ್ತೇವೆ. ಈ ರೀತಿ ನಡೆಯುತ್ತಿದ್ದರೆ, ನನಗೆ ಪತ್ರ ಬರೆದು ತಿಳಿಸಿ ಎಂದು ನಾನು ಸಾರ್ವಜನಿಕರಿಗೆ ನಾನು ಹೋದ ಕಡೆಯಲ್ಲೆಲ್ಲಾ ಹೇಳಿದ್ದೇನೆ. ಆ ರೀತಿ ಎಲ್ಲೆಲ್ಲಿ ತಿಳಿಸಿದ್ದಾರೆ. ಅಂಥ ಕಡೆಗಳಲ್ಲಿ ರೈಡ್ ಮಾಡಿದ್ದಾರೆ, ಹಿಡಿದುಕೊಂಡು ಬಂದಿದ್ದಾರೆ. ಬೆಂಗಳೂರಿನಲ್ಲಿ ಅಸಿಸ್ಟೆಂಟ್ ಪೊಲೀಸ್ ಕಮೀಷನರ್‌ರವರ ಆಫೀಸ್ ಪಕ್ಕದಲ್ಲೇ ದೊಡ್ಡದಾಗಿ ನಡೆಯುತ್ತಿದೆ ಎಂದು ಹೇಳಿದರು. ಆ ಬಗ್ಗೆ ನಾನು ಪೊಲೀಸ್ ಕಮೀಷನರಿಗೆ ಹೇಳಿದೆ. ಕೂಡಲೇ ಅವರನ್ನು ಹಿಡಿದರು. ಇದಕ್ಕೆ ಏನೇ ಮಾಡಬೇಕಾದರೂ, ಲಾಟರಿ ಇಲಾಖೆಯಲ್ಲಿರುವ ಡೈರೆಕ್ಟರ್‌ಗಳು ಮತ್ತು ಹಿರಿಯ ಅಧಿಕಾರಿಗಳ ಸಹಕಾರದೊಂದಿಗೆ ಪೊಲೀಸರು ಮಾಡಬೇಕು ಪ್ರತಿನಿತ್ಯ ಪೊಲೀಸರು ಹೆಚ್ಚು ನಿಗಾ ವಹಿಸಬೇಕು. ಎಲ್ಲಾ ಮಾನ್ಯ ಸದಸ್ಯರು ಹೇಳಿದುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನೊಂದು ಸಲ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ಎಸ್. ಪಿ.ಗಳ, ಡಿ. ಸಿ.ಗಳ ಸಭೆಯನ್ನು ಕರೆದು, ಮುಂದೆ ಇದು ನಡೆಯದಂತೆ ನೋಡಿಕೊಳ್ಳುವ ಪ್ರಯತ್ನವನ್ನು ಮಾಡುವಂಥ ಕೆಲಸವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡಲು ಪ್ರಯತ್ನ ಪಟ್ಟರು)

ಅಧ್ಯಕ್ಷರು : ಆಯಿತು, ಈಗ ಮುಂದೆ ಹೋಗೋಣ. ಅವರು ಅಷ್ಟೇ ಉತ್ತರ ಹೇಳಲು ಸಾಧ್ಯ. ಅವರು ಇನ್ನೇನು ಹೇಳುತ್ತಾರೆ. ಎಲ್ಲಾ ಸದಸ್ಯರೂ ಗಮನಿಸಬೇಕು, ಅನೇಕ ವಿಚಾರಗಳಲ್ಲಿ ಸರ್ಕಾರ with all good intention ಒಂದು ಆದೇಶ ಮಾಡುತ್ತದೆ. ಆದರೆ ಅದು ಜಾರಿಯಾಗುವುದಿಲ್ಲ. ಜಾರಿ ಮಾಡತಕ್ಕಂಥ ವ್ಯವಸ್ಥೆ ಸರಿಯಿಲ್ಲ. ಅದಕ್ಕೆ ನೀವು ಎಲ್ಲಾ ರಾಜಕೀಯ ಪಕ್ಷಗಳು ಕುಳಿತುಕೊಂಡು ಒಂದು

ಕಟ್ಟುನಿಟ್ಟಿನ ತೀರ್ಮಾನ ಮಾಡಿದರೆ ಆಗುತ್ತದೆ. ಅದು ಆಗದಿದ್ದರೆ ಏನಾಗುತ್ತದೆ ಎಂದರೆ, ಸುಮ್ಮನೆ ತೌಡು ಕುಟ್ಟಿಕೊಂಡು ಮನೆಗೆ ಹೋದ ಹಾಗೆ ಆಗುತ್ತದೆ. ಆದ್ದರಿಂದ, ಈಗ ಮುಂದೆ ಹೋಗೋಣ.

ಶ್ರೀ ಅರಗ ಜ್ಞಾನೇಂದ್ರ : ಇದು ಸರ್ಕಾರದಿಂದ ಬೇರೆ ಇದೆಯೇ, ಹೇಗೆ ? ಇದರಿಂದ, ಎಷ್ಟೋ ಬಡ ಹೆಣ್ಣು ಮಕ್ಕಳ ಮಾಂಗಲ್ಯ ಹೋಗುತ್ತಿದೆ.

ಅಧ್ಯಕ್ಷರು : ನಾನು ಹೇಳಿದುದು ತಮಗೆ ಅರ್ಥವಾಯಿತು ತಾನೇ ? ಎಲ್ಲಾ ಸರ್ಕಾರಗಳ ಕಡೆಯೂ ಅದೇ ಆಗಿದೆ. ಈಗ ಏನಾಗಿದೆ ಎಂದರೆ ಅಧಿಕಾರಿಗಳು ಅತ್ಯಂತ ಭ್ರಷ್ಟರಾಗಿದ್ದಾರೆ. ಅವರು ಏನು ಹೇಳುತ್ತಿದ್ದಾರೆ ಎಂದರೆ, ಅದು ಅವರ ಇಲಾಖೆಗೆ ಬರುವುದಿಲ್ಲ. ಅದು ಗೃಹ ಇಲಾಖೆಗೆ ಹೋಗುತ್ತದೆ. ಅವರು ಗೃಹ ಇಲಾಖೆಗೆ ಹೇಳಬೇಕು. ಗೃಹ ಇಲಾಖೆಯ ಕಥೆ ಗೊತ್ತಲ್ಲಾ. ಆದ್ದರಿಂದ, ನಾನು ಏನು ಹೇಳುತ್ತೇನೆ ಎಂದರೆ, ಯಾವುದೇ ಏರಿಯಾದಲ್ಲಿ ಇದು ನಡೆಯುತ್ತಿದ್ದರೆ, ಸಂಬಂಧಿಸಿದ ಎಸ್ ಪಿ. ಗೆ ಅದರ ಹೊಣೆಯನ್ನು ಫಿಕ್ಸ್ ಮಾಡಿ. ಆ ಜಿಲ್ಲೆಯಲ್ಲಿ ಏನಾದರೂ ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ನೀವು, ಮುಖ್ಯಮಂತ್ರಿಗಳೂ ಎಲ್ಲರೂ ಸೇರಿ ಚರ್ಚೆ ಮಾಡಿ, ಇದನ್ನು ಮಾಡಿ. ಆಗ ಇದು ಏಕೆ ಆಗುವುದಿಲ್ಲ ನೋಡೋಣ. ಇದು ಬಡವರ ಕಾರ್ಯಕ್ರಮ, ಇದರಿಂದ ಬಡವರು ಹಾಳಾಗುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಪೊಲೀಸ್ ಇಲಾಖೆ ಏಕೆ ಈ ನಿಟ್ಟಿನಲ್ಲಿ ಸಹಕಾರ ಕೊಡುತ್ತಿಲ್ಲ. ನೀವು ಅವರಿಗೆ ಪತ್ರ ಬರೆದಿದ್ದರೂ, ನಮಗೆ ಪತ್ರ ತಲುಪಿಲ್ಲ ಎಂದು ಪೊಲೀಸ್ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ. ನಿಮಗೂ, ಅವರಿಗೂ ಹೊಂದಾಣಿಕೆಯಿಲ್ಲವೇ ? ಸಾಮರಸ್ಯವಿಲ್ಲವೇ?

ಅಧ್ಯಕ್ಷರು : ಏಕೆ ಆ ರೀತಿಯ ಪ್ರಶ್ನೆಗಳನ್ನು ಕೇಳುತ್ತೀರಿ ಸ್ವಾಮಿ ನಾನು ಅಡ್ವರ್ಟೈಸ್ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಆ ರೀತಿಯಲ್ಲಿ, ನೀವು ವ್ಯವಸ್ಥೆಯ ಬಗ್ಗೆ ಮಾತನಾಡಿ, ಸುಮ್ಮನೆ ಏಕೆ ಅವರನ್ನು ಚುಚ್ಚುತ್ತೀರಿ ? ವ್ಯವಸ್ಥೆ ಕೆಟ್ಟಿದೆ. ಅದಕ್ಕೆ ಏನು ಮಾಡಬೇಕು ಎನ್ನುವುದನ್ನು ಕುಳಿತುಕೊಂಡು ಮಾತನಾಡಿ. ಕಟ್ಟುನಿಟ್ಟಿನ ಕ್ರಮ ತೆಗೆದು ಕೊಳ್ಳುವಂತೆ ಮಾತನಾಡಿ. ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ. ಇದು ಬಡವರ ಕಾರ್ಯಕ್ರಮ. ಇದರಿಂದ ಬಡವರೆಲ್ಲಾ ಹಾಳಾಗುತ್ತಿದ್ದಾರೆ. ಅದರ ಬಗ್ಗೆ ನೀವೆಲ್ಲಾ ನಾಯಕರುಗಳು, ವಿರೋಧ ಪಕ್ಷದ ನಾಯಕರು, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಸಂಬಂಧಪಟ್ಟವರ ಹತ್ತಿರ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆಇಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕು

ಅಧ್ಯಕ್ಷರು : ಇದು ಗಂಭೀರವಾದ ಪ್ರಶ್ನೆ. ಯಡಿಯೂರಪ್ಪನವರೇ, ದಯಮಾಡಿ

ನೀವೆಲ್ಲರೂ ಕುಳಿತುಕೊಂಡು ಮಾತನಾಡಿ. ಇದಕ್ಕೆ ಒಂದು ಸೊಲ್ಯೂಷನ್ ಕಂಡುಹಿಡಿಯಬೇಕು. ಈಗ ಮುಂದಕ್ಕೆ ಹೋಗೋಣ. ಈಗ ಅಂಗಾರರವರ ಪ್ರಶ್ನೆ. ಅಂಗಾರರವರ ಪರವಾಗಿ ಯೋಗೀಶ್ ಭಟ್‌ರವರು ಪ್ರಶ್ನೆಯನ್ನು ಕೇಳಬೇಕು. ದಯಮಾಡಿ ಅಂಗಾರರವರ ಪರವಾಗಿ ನೀವು ಪ್ರಶ್ನೆಯನ್ನು ಕೇಳಿ. ಸಮಯ ಆಗಿ ಹೋಯಿತು. ಈ ಪ್ರಶ್ನೆಗೆ ಅವರು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಲಾಟರಿ ನಿಂತು ಹೋಯಿತು ಎಂದೇ, ನೀವು ಹೇಳಿದ ಮೇಲೆ ಲಾಟರಿ ನಿಂತಿತೇ ?

ಅಧ್ಯಕ್ಷರು : ಸುಮ್ಮನೇ ಮಾತನಾಡುವುದು ಬೇಡ. ನೀವೆಲ್ಲಾ ಕುಳಿತುಕೊಂಡು ಮಾತನಾಡಿ, ಸಮಸ್ಯೆಯನ್ನು ಇತ್ಯರ್ಥ ಮಾಡಿ. ಸುಮ್ಮನೆ ಪದೇ ಪದೇ ಮಾತನಾಡಿದರೆ ಏನು ಪ್ರಯೋಜನವಾಗುವುದಿಲ್ಲ. ವಾಟಾಳ್‌ರವರೇ ದಯಮಾಡಿ ಕುಳಿತುಕೊಳ್ಳಿ. ಬೇಕಾದರೆ ಇನ್ನೊಂದು ಸಲ ಚರ್ಚೆ ಮಾಡೋಣ. ಅಂಗಾರರವರ ಪರವಾಗಿ ನೀವು ಪ್ರಶ್ನೆಯನ್ನು ಕೇಳಿ.

---

1. ಚುಕ್ಕಿ ಗುರುತಿನ ಪ್ರಶ್ನೆ ಸಂಖ್ಯೆ : 3586

2. ಮಾನ್ಯ ಸದಸ್ಯರ ಹೆಸರು : ಶ್ರೀ ಅಂಗಾರ.ಎಸ್. (ಸುಳ್ಯ)

3. ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th colspan="4">ಉತ್ತರಗಳು</th></tr>
<tr><td>ಅ)</td><td>ಕಳೆದ 3 ವರ್ಷದಲ್ಲಿ ಜಾಲ್ಸೂರು ಸುಬ್ರಮಣ್ಯ ರಸ್ತೆಯಲ್ಲಿ ಎಷ್ಟು ಅಪಘಾತಗಳು ಸಂಭವಿಸಿದೆ;</td><td colspan="4">28</td></tr>
<tr><td>ಆ)</td><td>ಸದರಿ ಅಪಘಾತಗಳಲ್ಲಿ ಎಷ್ಟು ಜನರಿಗೆ ಸಣ್ಣ ಪುಟ್ಟ ಮತ್ತು ತೀವ್ರ ತರದ ಗಾಯಗಳು ಆಗಿವೆ ಹಾಗೂ ಎಷ್ಟು ಜನರು ಮೃತ ಪಟ್ಟಿದ್ದಾರೆ (ಪೂರ್ತಿ ವಿವರ ನೀಡುವುದು);</td><td>ವರ್ಷ</td><td>ಸಣ್ಣಪುಟ್ಟ ಗಾಯ ಗೊಂಡವರು</td><td>ತೀವ್ರ ತರದ ಗಾಯ ಗೊಂಡವರು</td><td>ಮೃತ ಪಟ್ಟವರು</td></tr>
<tr><td></td><td></td><td>2002</td><td>5</td><td>1</td><td>2</td></tr>
<tr><td></td><td></td><td>2003</td><td>3</td><td>5</td><td>2</td></tr>
<tr><td></td><td></td><td>2004</td><td>6</td><td>7</td><td>1</td></tr>
<tr><td></td><td></td><td>2005 (28–2–05</td><td>18</td><td>–</td><td>1</td></tr>
</table>